ಈ) ಈ ಕಛೇರಿಯನ್ನು ಹರಪನಹಳ್ಳಿಯಲ್ಲಿಯೇ ಸ್ಥಾಪಿಸಲು ಜಿಲ್ಲಾಧಿಕಾರಿಗಳಿಂದ ಸರ್ಕಾರಕ್ಕೆ ವರದಿ ಬಂದಿರುವುದು ನಿಜವಲ್ಲವೇ ?

ಉ) ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಈ ಹಿಂದೆ ಬಳ್ಳಾರಿಗೆ ಬಂದಿದ್ದಾಗ ಈ ಬಗ್ಗೆ ಸೂಕ್ತ ಕ್ರಮದ ಭರವಸೆ ಕೊಟ್ಟಿದ್ದುದು ನಿಜವಲ್ಲವೇ ?

ಊ) ಹಾಗಿದ್ದಲ್ಲಿ ಸಹಾಯಕ ಆಯುಕ್ತರ ಕಛೇರಿಯನ್ನು ಹರಪನಹಳ್ಳಿಯಲ್ಲಿ ಸ್ಥಾಪಿಸುವ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಹೌದು.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) ...

ಊ) ಹರಪನಹಳ್ಳಿಯಲ್ಲಿ ಕಂದಾಯ ಉಪ ವಿಭಾಗವನ್ನು ರಚಿಸುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀ ಬಿ. ಹೆಚ್. ಯಂಕಾನಾಯಕ್.—ಇದನ್ನು ಯಾವಾಗ ಪರಿಶೀಲಿಸುತ್ತೀರಿ' ಯಾವಾಗ ಮಾಡಿ ಕೊಡುತ್ತೀರಿ ಮೊನ್ನೆ ಇದರ ಬಗ್ಗೆ ಸದನದಲ್ಲಿ ಗಲಾಟೆಯಾಯಿತು. ಹರಪನಹಳ್ಳಿ ಸೆಂಟ್ರಲ್ ಪ್ಲೇಸ್ ಎಂದು ಹೇಳಿದ್ದೀರಿ. ಜಿಲ್ಲಾಧಿಕಾರಿಗಳು ಡಿವಿಜನಲ್ ಕಮೀಷನರ್‌ರವರು, ಅಸಿಸ್ಟೆಂಟ್ ಕಮೀಷನರ್ ರವರು ಆಫೀಸ್ ಅನ್ನು ಓಪನ್ ಮಾಡಬೇಕೆಂದು ಸರಕಾರಕ್ಕೆ ರೆಕಮಂಡ್ ಮಾಡಿ ಕಳಿಸಿದ್ದಾರೆ. ಇದರಲ್ಲಿ ಏನಾದರೂ ರಾಜಕೀಯ ಇದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಇದರಲ್ಲಿ ರಾಜಕೀಯ ಇಲ್ಲ. ಹರಪನಹಳ್ಳಿ ಸೂಕ್ತವೆಂದು ನಮ್ಮ ಭಾವನೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಅನಧಿಕೃತ ಗೃಹ ನಿವೇಶನ ಹಾಗೂ ಜಮೀನನ್ನು ಕ್ರಮಬದ್ಧಗೊಳಿಸುವುದು

೭ ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).— ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯ ಸಿರ್ಸಿ ಸಿದ್ದಾಪುರ ತಾಲ್ಲೂಕಿನಲ್ಲಿ ೧೫-೨೦ ವರ್ಷಗಳಿಂದ ವಸತಿ ನಿವೇಶನ ಹಾಗೂ ಜಮೀನು ಅತಿಕ್ರಮಣದಿಂದ ಉಪಯೋಗಿಸಿಕೊಂಡು ಬರಲಾಗಿದ್ದವುಗಳನ್ನು ಸರ್ಕಾರ ದವರು ಸಕ್ರಮಗೊಳಿಸಲು ಕ್ರಮಗಳನ್ನೇನಾದರು ಕೈಗೊಂಡಿದ್ದಾರೆಯೇ ?

ಆ) ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು ? ಹಾಗೂ ಈಗಲಾದರೂ ಸಕ್ರಮಗೊಳಿಸಲು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು)—

ಅ) ಹೌದು, ಸರ್ಕಾರ ಕ್ರಮ ಕೈಗೊಂಡಿದೆ.

ಆ) ಸರ್ಕಾರವು ದಿನಾಂಕ ೧.೯.೭೭ ರಂದು ಮತ್ತು ೨೭.೩.೮೧ ರಂದು ಸರ್ಕಾರದ ಜಮೀನು ಗಳಲ್ಲಿಯ ಅನಧಿಕೃತ ಅತಿಕ್ರಮಣಗಳನ್ನು ಕ್ರಮಬದ್ಧಗೊಳಿಸಲು ಆದೇಶಗಳನ್ನು ಹೊರಡಿಸಿದೆ. ಸದರಿ ಸರ್ಕಾರದ ಆದೇಶದ ಪರಿಮಿತಿಯಲ್ಲಿ ಅರ್ಹತೆಯನ್ನು ಹೊಂದಿದ ಎಲ್ಲ ಪ್ರಕರಣಗಳನ್ನು ಸಕ್ರಮ ಗೊಳಿಸಿದೆ. ಸಿರ್ಸಿ ಮತ್ತು ಸಿದ್ದಾಪುರ ತಾಲ್ಲೂಕಿನ ಅಂಕಿ ಅಂಶಗಳನ್ನು ಈ ಕೆಳಗೆ ನಮೂದಿಸಿದೆ.

ವ್ಯವಸಾಯ ಉದ್ದೇಶಕ್ಕಾಗಿ ಸರ್ಕಾರಿ ಜಮೀನನ್ನು ಸಕ್ರಮಗೊಳಿಸಿದ ಬಗ್ಗೆ

		ಸಿರ್ಸಿ		ಸಿದ್ದಾಪುರ	
		ನಂ.	ವಿಸ್ತೀರ್ಣ ಎ. ಗುಂ.	ನಂ.	ವಿಸ್ತೀರ್ಣ ಎ. ಗುಂ.
	೧	೨	೩	೪	೫
೧)	ಅನಧಿಕೃತ ಒತ್ತುವರಿ	೨೩	೫೧–೧೫	೧೭	೨೪–೩೩
೨)	ಸಕ್ರಮಗೊಳಿಸಿದವುಗಳು	೨೩	೫೧–೧೫	೧೭	೨೪–೩೩

ಮನೆ ನಿವೇಶನಕ್ಕಾಗಿ ಸರಕಾರಿ ಜಮೀನನ್ನು ಸಕ್ರಮಗೊಳಿಸಿದ ಬಗ್ಗೆ

		ಸಿರ್ಸಿ	ಸಿದ್ದಾಪುರ
	೧	೨	೩
೧)	ಅನಧಿಕೃತ ಒತ್ತುವರಿ ಮಾಡಿದವರ ಸಂಖ್ಯೆ	೪೯೬	೪೫೫
೨)	ಸದರಿ ಸರಕಾರಿ ಆದೇಶಗಳನ್ವಯ ಸಕ್ರಮಗೊಳಿಸಿದವುಗಳ ಸಂಖ್ಯೆ	೧೨೨	೧೮
೩)	ಸಕ್ರಮಗೊಳಿಸಲು ಬಾಕಿ ಉಳಿದಿರುವ ಪ್ರಕರಣಗಳಸಂಖ್ಯೆ.	೩೭೪	೨೭

ಸಕ್ರಮಗೊಳಿಸಲು ಬಾಕಿ ಉಳಿದಿರುವ ಪ್ರಕರಣಗಳು ಅರ್ಹತೆಯನ್ನು ಪಡೆಯದೆಯಿದ್ದ ಪ್ರಯುಕ್ತ ಮೇಲ್ಕಾಣಿಸಿದ ಆದೇಶಗಳಡಿಯಲ್ಲಿ ಸಕ್ರಮಗೊಳಿಸಿರುವುದಿಲ್ಲ. ''ವಿಧಾನ ಮಂಡಲದ ಜಂಟಿ ಪರಿಶೀಲನಾ ಸಮಿತಿಯ'' ಮುಂದೆಯಿರುವ ಕರಡು ಮಸೂದೆ ಪಾಸಾದ ನಂತರ ಬಾಕಿ ಉಳಿದ ಪ್ರಕರಣಗಳನ್ನು ಅರ್ಹತೆಯ ಮೇರೆಗೆ ಸಕ್ರಮಗೊಳಿಸಲಾಗುವುದು.

ಭಿಕ್ಷಾಟನೆಯ ನಿಷೇಧ

೬೭೭ ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಹಾತ್ಮ ಗಾಂಧಿ ರಸ್ತೆ ಮತ್ತು ಬ್ರಿಗೇಡ್ ರಸ್ತೆಗಳಲ್ಲಿ ಕುಷ್ಠರೋಗಿಗಳ ಜೊತೆ ಮಕ್ಕಳು ಭಿಕ್ಷೆ ಬೇಡುವುದಕ್ಕೆ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ, ಸರ್ಕಾರವು ಇದನ್ನು ತಪ್ಪಿಸುವ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಂಡಿದೆ ಅಥವಾ ತೆಗೆದುಕೊಳ್ಳುವ ಪ್ರಸ್ತಾವನೆ ಇದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.